# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1409 |
| ಸದಸ್ಯರ ಹೆಸರು | : | ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 30-12-2022 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ.ಸಂ | ವಿಷಯ | ಉತ್ತರ |
|---|---|---|
| (ಅ) | ಪರಿಶಿಷ್ಟ ಜಾತಿ ಸಮುದಾಯದವರ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿ/ಏಳಿಗೆಗಾಗಿ ಇರುವ ಕಲ್ಯಾಣ ಕಾರ್ಯಕ್ರಮಗಳು ಯಾವುವು? | ಪರಿಶಿಷ್ಟ ಜಾತಿ ಸಮುದಾಯದವರ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಮೂಲಕ "ಪ್ರಬುದ್ಧ" ವಿದೇಶಿ ಉನ್ನತ ವ್ಯಾಸಂಗ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. |
| (ಆ) | ರಾಜ್ಯದ ಪರಿಶಿಷ್ಟ ಜಾತಿ ಸಮುದಾಯದ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ವ್ಯಾಸಂಗ ಮಾಡುವ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆಯೇ; ಇದ್ದಲ್ಲಿ, ಕಳೆದ 3 ವರ್ಷಗಳಲ್ಲಿ ಇದರ ಪ್ರಯೋಜನ ಪಡೆದವರೆಷ್ಟು; ವಿದೇಶಿ ವ್ಯಾಸಂಗಕ್ಕೆ ಇರುವ ಮಾನದಂಡವೇನು; (ಯಾವ ದೇಶ, ಯಾವ ಶಿಕ್ಷಣ ಸಂಸ್ಥೆ ಇತ್ಯಾದಿಗಳ ಕುರಿತು ಸಂಪೂರ್ಣ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಪರಿಶಿಷ್ಟ ಜಾತಿ ಸಮುದಾಯದ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡುವ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಕಳೆದ 3 ವರ್ಷಗಳಲ್ಲಿ ಇದರ ಪ್ರಯೋಜನೆ ಪಡೆದ ಅಭ್ಯರ್ಥಿಗಳ ಸಂಖ್ಯಾವಾರು ವಿವರ ಈ ಕೆಳಕಂಡಂತಿದೆ.<br><br>ಕ್ರ.ಸಂ / ವರ್ಷ / ಪ.ಜಾತಿ<br>01 / 2019-20 / 48<br>02 / 2020-21 / 45<br>03 / 2021-22 / 70<br>ಒಟ್ಟು / 163<br><br>ವಿದೇಶಿ ವ್ಯಾಸಂಗಕ್ಕೆ ಇರುವ ಮಾನದಂಡಗಳು:-<br><br>1.ಅಭ್ಯರ್ಥಿಯು ಕರ್ನಾಟಕದ ನಿವಾಸಿಯಾಗಿರಬೇಕು.<br>2.ಕರ್ನಾಟಕ ರಾಜ್ಯ ಸರ್ಕಾರ ಪ್ರಕಟಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು.<br>3.ಇಲಾಖೆಯಿಂದ ಕಾಲಕಾಲಕ್ಕೆ ಪ್ರಕಟಿಸಲಾದ ವಿದೇಶಿ ವಿಶ್ವ ವಿದ್ಯಾಲಯದಿಂದ ಆಫರ್ ಲೆಟರ್ ಪಡೆದಿರಬೇಕು.<br>4.ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಲು ಉದ್ದೇಶಿಸಿರುವ ಅಭ್ಯರ್ಥಿಯು ಯು.ಜಿ.ಸಿ. ಮಾನ್ಯತೆ ಪಡೆದ ವಿಶ್ವ ವಿದ್ಯಾಲಯದಿಂದ ಪದವಿಯನ್ನು ಪಡೆದಿರಬೇಕು. ಪಿ.ಹೆಚ್.ಡಿ. ಅಧ್ಯಯನಕ್ಕೆ ತೆರಳುವ ಅಭ್ಯರ್ಥಿಗಳು ಸ್ನಾತಕೋತ್ತರ ಪದವಿ ಪಡೆದಿರಬೇಕು.<br>5.ಪ್ರಬುದ್ಧ ಯೋಜನೆಯಡಿ ಸ್ನಾತಕೋತ್ತರ ಪದವಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪದವಿಯಲ್ಲಿ ಕನಿಷ್ಠ 55% ರಷ್ಟು ಅಂಕವನ್ನು ಗಳಿಸಿರಬೇಕು, ಪಿ.ಹೆಚ್.ಡಿ ಪದವಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸ್ನಾತಕೋತ್ತರ ಪದವಿಯಲ್ಲಿ 55% ರಷ್ಟು ಅಂಕವನ್ನು ಗಳಿಸಿರಬೇಕು.<br>6.ವಾರ್ಷಿಕ ರೂ. 25.00 ಲಕ್ಷ ವರೆಗಿನ ಕೌಟುಂಬಿಕ ಆದಾಯ |

| | | ಹೊಂದಿರುವವರು ಅರ್ಜಿ ಸಲ್ಲಿಸಬಹುದು. ಆದರೆ ಕುಟುಂಬದ ವಾರ್ಷಿಕ ಆದಾಯದ ಆಧಾರದ ಮೇಲೆ ಸಹಾಯ ಧನವನ್ನು ಪೂರ್ಣ ಪ್ರಮಾಣದಲ್ಲಿ ಹಾಗೂ ಭಾಗಶಃ ರೂಪದಲ್ಲಿ ನೀಡಲಾಗುತ್ತದೆ.<br>7.ಅಭ್ಯರ್ಥಿಗಳನ್ನು ಪದವಿಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡುವುದು, ಪಿ.ಹೆಚ್.ಡಿ. ಅಭ್ಯರ್ಥಿಗಳನ್ನು ಸ್ನಾತಕೋತ್ತರ ಪದವಿಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.<br>8.ಸ್ನಾತಕೋತ್ತರ ಅಥವಾ ಪಿ.ಹೆಚ್.ಡಿ. ಎರಡರಲ್ಲಿ ಒಂದಕ್ಕೆ ಒಂದು ಬಾರಿ ಮಾತ್ರ ಇಲಾಖೆಯಿಂದ ಧನ ಸಹಾಯವನ್ನು ಪಡೆಯಲು ಅರ್ಹರಿರುತ್ತಾರೆ.<br>9. ಅಭ್ಯರ್ಥಿಯು QS / US News Overall Global Ranking 500 ರೊಳಗೆ ಸ್ಥಾನ ಪಡೆದ ವಿದೇಶಿ ವಿಶ್ವ ವಿದ್ಯಾಲಯ/ಸಂಸ್ಥೆಗಳಲ್ಲಿ Unconditional Offer Letter ಪಡೆದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸುವುದು. |
|---|---|---|

**ದೇಶವಾರು ಅಭ್ಯರ್ಥಿಗಳ ವಿವರ**

| ಕ್ರ.ಸಂ | ವಿದೇಶ | 2019-20 | 2020-21 | 2021-22 | Total |
|---|---|---|---|---|---|
| 1 | ಯು.ಎಸ್.ಎ | 15 | 11 | 22 | 48 |
| 2 | ಯು.ಕೆ | 9 | 15 | 25 | 49 |
| 3 | ಕೆನಡ | 1 | 3 | 2 | 06 |
| 4 | ಫ್ರಾನ್ಸ್ | 0 | 0 | 0 | 00 |
| 5 | ಇಟಲಿ | 0 | 2 | 4 | 06 |
| 6 | ಜರ್ಮನಿ | 3 | 1 | 4 | 08 |
| 7 | ಐರ್ಲ್ಯಾಂಡ್ | 1 | 2 | 3 | 06 |
| 8 | ಸ್ವೀಡನ್ | 0 | 3 | 2 | 05 |
| 9 | ಸ್ವಿಸ್ | 0 | 0 | 0 | 00 |
| 10 | ಆಸ್ಟ್ರೇಲಿಯಾ | 18 | 6 | 6 | 30 |
| 11 | ನ್ಯೂಜಿಲ್ಯಾಂಡ್ | 0 | 2 | 1 | 03 |
| 12 | ಸಿಂಗಪೂರ್ | 0 | 0 | 0 | 00 |
| 13 | ಇತರೆ | 1 | 0 | 1 | 02 |
| | ಒಟ್ಟು | 48 | 45 | 70 | 163 |

**ವಿಷಯವಾರು ಅಭ್ಯರ್ಥಿಗಳ ವಿವರ**

| ಕ್ರ.ಸಂ | ವಿಷಯ | 2019-20 | 2020-21 | 2021-22 | Total |
|---|---|---|---|---|---|
| 1 | ಇಂಜಿನಿಯರಿಂಗ್ | 35 | 27 | 41 | 103 |
| 2 | ಮ್ಯಾನೇಜ್‌ಮೆಂಟ್ | 9 | 4 | 15 | 28 |
| 3 | ಪ್ಯೂರ್ ಸೈನ್ಸ್ & ಅಪ್ಲೈಡ್ ಸೈನ್ಸ್ | 1 | 9 | 11 | 21 |
| 4 | ಅಗ್ರಿಕಲ್ಚರ್ ಸೈನ್ಸ್ | 1 | 0 | 0 | 01 |
| 5 | ಮೆಡಿಸಿನ್ | 0 | 0 | 0 | 00 |
| 6 | ಇಂಟರ್‌ನ್ಯಾಷನಲ್ ಕಾಮರ್ಸ್ | 0 | 0 | 0 | 00 |
| 7 | ಇಂಟರ್‌ನ್ಯಾಷನಲ್ ಎಕನಾಮಿಕ್ಸ್ | 1 | 0 | 0 | 01 |
| 8 | ಇಂಟರ್‌ನ್ಯಾಷನಲ್ ಅಕೌಂಟಿಂಗ್ | 0 | 1 | 0 | 01 |

| | | | | | |
|---|---|---|---|---|---|
| | ಫಿನಾನ್ಸ್ | | | | |
| 9 | ಹ್ಯುಮಾನಿಟೀಸ್ | 0 | 1 | 0 | 01 |
| 10 | ಸೋಶಿಯಲ್ ಸೈನ್ಸ್ | 0 | 0 | 0 | 00 |
| 11 | ಫೈನ್ ಆರ್ಟ್ಸ್ | 1 | 0 | 2 | 03 |
| 12 | ಲಾ | 0 | 3 | 1 | 04 |
| 13 | ಹಿಸ್ಟರಿ | 0 | 0 | 0 | 00 |
| | ಒಟ್ಟು | 48 | 45 | 70 | 163 |

| | | |
|---|---|---|
| (ಇ) | ಪರಿಶಿಷ್ಟ ಜಾತಿ ಸಮುದಾಯದ ವಿವಿಧ ಶೈಕ್ಷಣಿಕ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಿಕೊಡುವ ನಿಟ್ಟಿನಲ್ಲಿ ಸರ್ಕಾರದ ಕಾರ್ಯ ಯೋಜನೆಗಳೇನು; | ಪರಿಶಿಷ್ಟ ಜಾತಿ ಸಮುದಾಯದ ವಿವಿಧ ಶೈಕ್ಷಣಿಕ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿಗಳಿಗೆ ವಿವಿಧ ಸರ್ಕಾರಿ / ಖಾಸಗಿ ಕ್ಷೇತ್ರಗಳಲ್ಲಿ ಉದ್ಯೋಗ ಪಡೆಯುವ ನಿಟ್ಟಿನಲ್ಲಿ ಪ್ರತಿ ವರ್ಷ UPSC / KAS / Banking / RRB / SSC & Group-C ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿ ನೀಡಲಾಗುತ್ತಿದ್ದು, ತರಬೇತಿ ಪಡೆದ ಅಭ್ಯರ್ಥಿಗಳು ವಿವಿಧ ಸರ್ಕಾರಿ / ಖಾಸಗಿ ಕ್ಷೇತ್ರಗಳಲ್ಲಿ ಉದ್ಯೋಗ ಪಡೆದಿರುತ್ತಾರೆ.<br><br>ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕೆ ಧನಸಹಾಯ ನೀಡಲಾಗುತ್ತಿದ್ದು, ಉನ್ನತ ವ್ಯಾಸಂಗ ಪೂರ್ಣಗೊಳಿಸಿದ ಅಭ್ಯರ್ಥಿಗಳು ಪ್ರತಿಷ್ಠಿತ ಅಂತರಾಷ್ಟ್ರೀಯ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ಪಡೆದಿರುತ್ತಾರೆ.<br><br>ವಿವಿಧ ಅರೆವೈದ್ಯಕೀಯ ಮತ್ತು ದ್ವಿತೀಯ ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಅಲ್ಪಾವಧಿ ಸರ್ಟಿಫಿಕೇಟ್ ಕೋರ್ಸ್ ಗಳಲ್ಲಿ ತರಬೇತಿ ನೀಡಿ ತರಬೇತಿ ಪಡೆವ ಅಭ್ಯರ್ಥಿಗಳಲ್ಲಿ 75% ರಷ್ಟು ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿಸುವ ಉದ್ದೇಶ ಹೊಂದಲಾಗಿದೆ. |
| (ಈ) | ವಿದೇಶದಲ್ಲಿ ವಿವಿಧ ಉದ್ಯೋಗವನ್ನು ಪಡೆಯುವ (ತಾಂತ್ರಿಕ ಮತ್ತು ತಾಂತ್ರಿಕೇತರ) ಪರಿಶಿಷ್ಟ ಜಾತಿ ಸಮುದಾಯದವರಿಗೆ ಸರ್ಕಾರದಿಂದ ಅಗತ್ಯ ನೆರವನ್ನು ಕಲ್ಪಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಅದಕ್ಕೆ ಇರುವ ಮಾನದಂಡವೇನು; ಇಲ್ಲದಿದ್ದಲ್ಲಿ, ವಿದೇಶದಲ್ಲಿ ಉದ್ಯೋಗ ದೊರಕಿಸಿಕೊಡುವ ನಿಟ್ಟಿನಲ್ಲಿ ಸರ್ಕಾರದ ನಿಲುವೇನು? | ಇಲಾಖೆಯ ಮೂಲಕ ಧನಸಹಾಯ ಪಡೆದ ಅಭ್ಯರ್ಥಿಗಳಲ್ಲಿ ಭಾಗಶ: ಅಭ್ಯರ್ಥಿಗಳು ಕೋರ್ಸ್ ಮುಕ್ತಾಯದ ಬಳಿಕ ವಿದೇಶದಲ್ಲಿ ವಿವಿಧ ಖಾಸಗಿ ಕಂಪನಿಗಳಲ್ಲಿ ಉದ್ಯೋಗವನ್ನು ಪಡೆದಿರುತ್ತಾರೆ. |

ಸಕಇ 807 ಎಸ್‌ಎಲ್‌ಪಿ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು